ಶ್ರೀ ಎ. ಜಿ. ರಾಮಚಂದ್ರರಾವ್.—ನೀವು ಕೇಳಿರುವುದು ಒಂದೇ ಆಫೀಸಿನ ವಿಚಾರವಲ್ಲ.

" (*a*) the number of Government Officers and officials that are working in the Mysore Government Secretariat for more than five years".

" (*b*) the number of such persons that are working for a number of years in other offices in Bangalore, *viz.*, New Public Offices, Office of the Director of Food Supplies, Office of the Deputy Commissioner and Survey Office."

It is very difficult to get the information.

ಶ್ರೀ ಬಿ. ಎಕ್. ಬೋರಣ್ಣಗೌಡ.—ತಾವು ಕೊಟ್ಟಿರತಕ್ಕ ಉತ್ತರದಲ್ಲಿ ಮೂರುವರ್ಷಗಳ ಮೇಲೆ ಸಾಮಾನ್ಯವಾಗಿ ವರ್ಗಾಯಿಸುವುದಾಗಿ ಹೇಳಿದ್ದೀರಿ. ಐದು ವರ್ಷಗಳ ಮೆಲೆ ಸೆಕ್ರಿಟೇರಿಯಟ್ಟಿನಲ್ಲಿ ಎಷ್ಟು ಜನರಿದ್ದಾರೆಂದು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರಿದ್ದಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—20 ವರ್ಷಗಳಿಂದಲೂ ಕೆಲವರು ಇಲ್ಲೇ ಇದ್ದಾರೆಂದರೆ ಒಪ್ಪುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—20 ವರ್ಷಗಳಿಂದ ಇರುವವರು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ತಮ್ಮ ಗಮನಕ್ಕೆ ತಂದರೆ ಜಾಗ್ರತೆ ಅವರುಗಳನ್ನು ಬೇರೆ ಕಡೆಗೆ ವರ್ಗಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಿದ್ದರೆ ನೋಡೋಣ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹೀಗೆ ಒಂದೇಕಡೆ ಬಹಳಕಾಲದಿಂದಿರುವುದರಿಂದ ಆಫೀಸಿನ ಗುಟ್ಟುಗೋಪ್ಯಗಳನ್ನು, ಸರ್ಕಾರದಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಅವರು ಹೊರಗಡೆಗೆ ತಿಳಿಸುತ್ತಾರೆಂಬುದು ತಮ್ಮ ಅವಗಾಹನೆಗೆ ಬಂದಿದೆಯೇ ?

Sri A. G. RAMACHANDRA RAO.—If a specific instance is brought to the notice of the Government, we will deal with that suitably.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮುಖ್ಯಮಂತ್ರಿಗಳ ಆಫೀಸಿನಲ್ಲಿ ಮತ್ತು ಸ್ಪೆಷಲ್ ಆಫೀಸುಗಳಲ್ಲಿ ಬಹಳ ದಿವಸಗಳಿಂದ ಇರುವವರಿದ್ದರೆ ಅವರನ್ನು ವರ್ಗಮಾಡುವುದಕ್ಕೆ ಯೋಚನೆಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ 10 ವರ್ಷಗಳಿಂದ ಗುಮಾಸ್ತರುಗಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—It does not arise.

A court for Kadur Taluk.

Q.—550. Sri Y. M. CHANDRASEKHARAIAH (Kadur).—

Will the Government be pleased to state:—

(*a*) whether it has come to their notice that a Court is necessary for Kadur Taluk;

(*b*) whether they have considered the suggestion that a Court be set up in Arsikere Taluk and certain parts of Kadur are to be attached to this Court;

(*c*) whether it is a fact that Courts sit up to 9 o'clock in the night on account of large number of cases in Tarikere and Chikmagalur Courts;

(*d*) whether this difficulty will not be obviated if a Court is set up in Kadur;

(*e*) whether early arrangements will be made to set up a Court in Kadur?

A.—Sri A. G. RAMACHANDRA RAO (Minister for Law and Education).—

(*a*) Representations have been made by the residents of Kadur Taluk praying for the establishment of a separate Court at Kadur.

(*b*) The question of re-distribution of the territorial and pecuniary jurisdictions of the several Courts in the State is under consideration of the High Court of Mysore and Government.

(*c*) Government is not aware of the Courts sitting up till 9 P.M.

(*d*) and (e) Does not arise in view of the reply furnished.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರಿಗೆ ಒಂದು ಬೇರೆ ಕೋರ್ಟುಬೇಕೆಂದು ಕೇಳಿ ಅರ್ಜಿ ಬಂದಿದೆಯೆಂದು ಹೇಳಿದ್ದೀರಿ. ಅರ್ಜಿ ಬಂದು ಎಷ್ಟು ದಿವಸವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವರ್ಷ ಬಂದಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಷ್ಟು ವರ್ಷಗಳಿಂದ ಹೀಗೆ ಅರ್ಜಿಗಳು ಬರುತ್ತಿವೆ ?

ಶ್ರೀ ಎ. ಜಿ ರಾಮಚಂದ್ರರಾವ್.—ಎಷ್ಟುವರ್ಷವೂ ಇಲ್ಲ. ಈಚೆಗೆ ತಾನೆ ಬಂದಿದೆ. ಇದನ್ನು ಇತ್ಯರ್ಥ ಮಾಡುವುದಕ್ಕಾಗಿ ಒಂದು ಕಮಿಟಿ ಏರ್ಪಡಿಸುವ ಸಂದರ್ಭವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕ ಮಿ ಟ ಏರ್ಪಾಡು ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕ ಮಿ ಟ ಮಾಡುವ ಬಗ್ಗೆ ವ್ಯವಹಾರ ನಡೆಸುತ್ತಿದ್ದೇವೆ. ಸದ್ಯದಲ್ಲೆ ಆಗಬಹುದೆಂದು ನಿರೀಕ್ಷಣೆಯಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿ ಬಡವರೇ ಇದ್ದಾರೆ, ದೊಡ್ಡವರಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಅಧ್ಯಕ್ಷರು.—ಅದನ್ನೆಲ್ಲಾ ಹೋದಪಾರವೇ ಹೇಳಿದ್ದೀರಿ.

Terms of admission to School of Engineering.

Q.—581. Sri V. R. NAIDU (Malleswaram).—

Will the Government be pleased to state :—

the terms of admission prescribed by Government binding the students at the time of their joining the School of Engineering ?

A.—Sri A. G. RAMACHANDRA RAO (Minister for Law and Education).—

An undertaking by the applicant attested by the parent (or guardian if parent is not alive) that he will not leave the school before completing the course.

ಶ್ರೀ ವಿ. ಆರ್. ನಾಯ್ಡು.—ಈಗ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸ್ಕೂಲಿಗೆ ಸೇರತಕ್ಕ ಕಾಲದಲ್ಲಿ ಅವರಿಂದ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತೀರಿ, ಅದು ಯಾವರೀತಿ ಇರುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅರ್ಜಿಯಲ್ಲೇ ಇರುತ್ತದೆ; ಮಧ್ಯಕಾಲದಲ್ಲಿ ಬಿಟ್ಟುಹೋಗುವುದಿಲ್ಲವೆಂದು ಬರೆದುಕೊಡಬೇಕು, ಅಷ್ಟೆ ಇರುವುದು.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿ ಸ್ಕೂಲಿಗೆ ಸೇರುವ ಕಾಲದಲ್ಲಿ ಸ್ಕೂಲಿನ ಯಾವ ಕ್ರಮವನ್ನನುಸರಿಸುತ್ತಿದ್ದಾನೋ ಅದನ್ನು ಮುಂದೆ ಬದಲಾಯಿಸುವುದಿಲ್ಲವೆಂಬುದು ಒಪ್ಪಂದದಲ್ಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿಗಳ ತಂದೆ ತಾಯಿಗಳು ಬರೆದು ಕೊಟ್ಟಿರುವ ಒಪ್ಪಂದದಲ್ಲಿದೆ ಅಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ದಯವಿಟ್ಟು ತೋರಿಸಿದರೆ, ನೋಡುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಅಲ್ಲ ಈಗಿರತಕ್ಕ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕೆಂದು ಇಂಡಿಯಾ ಸರ್ಕಾರದಿಂದೇನಾದರೂ ಸೂಚನೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾಭ್ಯಾಸದ ಕ್ರಮದಲ್ಲಲ್ಲ, ಇಂಜಿನಿಯರಿಂಗ್ ಸ್ಕೂಲು ಮತ್ತು ಇತರ ಟೆಕ್ನಿಕಲ್ ಸ್ಕೂಲು ಮತ್ತು ಶಿಕ್ಷಣಸಂಸ್ಥೆಗಳ ಆಡಳಿತ ಕ್ರಮವನ್ನು ಬದಲಾಯಿಸಬೇಕೆಂದು ಅಲ್ಲಿಂದ ಸೂಚನೆ ಬಂದಿತ್ತು.

ಶ್ರೀ ವಿ. ಆರ್. ನಾಯ್ಡು.—ಯಾವಾಗ ಬಂತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ತಿಂಗಳ ಹಿಂದೆ.

ಶ್ರೀ ವಿ. ಆರ್. ನಾಯ್ಡು.—ಆ ಟೆಕ್ನಿಕಲ್ ಬೋರ್ಡಿನವರು ಕೊಡುವ ಸರ್ಟಿಫಿಕೇಟು ರೆಕಗ್ನೈಸ್ ಆಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಿದೆ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿಯ ವಿದ್ಯಾರ್ಥಿಗಳು ಹಿಂದಿದ್ದ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ಮುಷ್ಕರಹೂಡಿ ಅರ್ಜಿಹಾಕಿಕೊಂಡಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಸಮಗ್ರವಾಗಿ ವಿಷಯ ತಿಳಿದುಕೊಳ್ಳದೆ ಸ್ವಲ್ಪ ತೊಂದರೆ ಕೊಟ್ಟದ್ದು ನಿಜ.

ಶ್ರೀ ವಿ. ಆರ್. ನಾಯ್ಡು.—ಹಿಂದಿದ್ದ ಪದ್ಧತಿಯ ಮೇಲೆ, ಕ್ರಮದಿಂದ ನಡೆಸಿಕೊಂಡು ಹೋಗಬೇಕೆಂದು ಸ್ಕೂಲಿನವರು ನಿರ್ಣಯಮಾಡಿ ಕಳುಹಿಸಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕ್ರಮದಲ್ಲಿ ಸಿಲಬಸ್ಸಿನಲ್ಲಿ, ಪರೀಕ್ಷೆಯಲ್ಲಿ ಯಾವುದಲ್ಲಿಯೂ ವ್ಯತ್ಯಾಸವಿಲ್ಲ. ಪರೀಕ್ಷೆಯನ್ನು ಟೆಕ್ನಿಕಲ್ ಬೋರ್ಡಿನವರು ಮಾಡಿ ಸರ್ಟಿಫಿಕೇಟು ಕೊಡುತ್ತಾರೆ, ಅಷ್ಟೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಬಂದಿರತಕ್ಕ ಶಿಫಾರಸ್ಸೇನು, ಹೀಗೆ ಆ ಸಮಿತಿಗೆ ಬದಲಾಯಿಸಿವ ವಿಚಾರದಲ್ಲಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಶಿಫಾರಸ್ಸು ಇನ್ನೇನೂ ಇಲ್ಲ, ಎರಡುಮೂರು ದಿನವ ಕೆಳಗೆ ಒಂದು ಪ್ರಶ್ನೆಗೆ ಕೊಟ್ಟರುವ ಉತ್ತರದಲ್ಲಿ ಸರ್ಕಾರಿ ಆಜ್ಞೆಯ ಪ್ರತಿಯನ್ನೂ ಕೊಟ್ಟಿದೆ, ಅದರಲ್ಲಿ ಈ ವಿವರವಿವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೊದಲದ್ದಹಾಗೆ ವಿಶ್ವವಿದ್ಯಾನಿಲಯದಲ್ಲೇ ಈ ಸಂಸ್ಥೆಯ ಆಡಳಿತ ಇರುವುದು ಬದಲಾಯಿಸಿ ಹೀಗೆ ಬದಲಾಯಿಸಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಶ್ವವಿದ್ಯಾನಿಲಯದಲ್ಲಿ ಈ ಸಂಸ್ಥೆ ಮೊದಲೂ ಇರಲಿಲ್ಲ, ಈಗಲೂ ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆದರೆ ಡಿಪ್ಲೋಮಾವನ್ನು ವಿಶ್ವವಿದ್ಯಾನಿಲಯದವರು ಕೊಡುತ್ತಿದ್ದರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಅವರಿಗೆ ಸಂಬಂಧವಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ವೈಸ್ ಚಾನ್ಸೆಲರ್ ಆ ಪ್ರತಿಸ್ತಿ ಪತ್ರಗಳಿಗೆ ರುಜು ಮಾಡುತ್ತಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಬೋರ್ಡಿನ ಚೇರ್ಮನ್ ಆಗಿದ್ದರು. ಅದರಿಂದ ರುಜುಮಾಡುತ್ತಿದ್ದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರೇ ಈಗಲೂ ರುಜುಮಾಡುವುದರಲ್ಲಿ ತೊಂದರೆಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನಾವಶ್ಯಕ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ಶಿಸ್ತು ಕಡಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಇದರಿಂದ ಉದ್ಭವಿಸುವುದಿಲ್ಲ.